INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-6, Issue -6, November--December, 2024,
PageNo,29- 35
Peer -Reviewed, Refereed Journal

# ಮೈಸೂರು ಸಂಸ್ಥಾನದ ಇತಿಹಾಸ ರಚನೆಗೆ ಸಿ.ಹಯವದನರಾವ್ ಬರವಣಿಗೆಗಳ ಒಂದು ಸ್ಥೂಲನೋಟ.

ದಿನೇಶ ವಿ..[1]

ದಕ್ಷಿಣ ಭಾರತದಲ್ಲಿ ಬಲಿಷ್ಠ ವಿಜಯನಗರ ಸಾಮ್ರಾಜ್ಯದ ಪತನ ನಂತರ ಆಂಧ್ರ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಅನೇಕ ಸಣ್ಣ–ಪುಟ್ಟ ರಾಜ್ಯಗಳು ಸ್ಥಾಪನೆಗೊಂಡು ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿದವು. ಅವುಗಳ ಪೈಕಿ ನನ್ನ ಅಧ್ಯಯನದ ವಿಷಯವಾದ ಮೈಸೂರು ಸಂಸ್ಥಾನವು ಒಂದಾಗಿದೆ.

ವಸಾಹತುಶಾಹಿ ಆಳ್ವಿಕೆಯಲ್ಲಿನ ದೇಶೀಯ ಸಂಸ್ಥಾನಗಳನ್ನು ಅಧ್ಯಯನ ಮಾಡಲು ಮೈಸೂರು ಸಂಸ್ಥಾನ ಹೆಚ್ಚು ಸೂಕ್ತವಾದ ಕ್ಷೇತ್ರವಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ರೂಪಿಸಿದ ವಸಾಹತುಶಾಹಿ ಆಳ್ವಿಕೆಯ ವಿವಿಧ ಪರಿಕರಗಳು ಇಲ್ಲಿ ಯಥೇಚ್ಛವಾಗಿ ದೊರಕುತ್ತವೆ ಮತ್ತು ಮೈಸೂರು ಆ ಸಂದರ್ಭದಲ್ಲೇ ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯಾ ದೃಷ್ಟಿಯಿಂದ ದೇಶೀಯ ಸಂಸ್ಥಾನಗಳಲ್ಲಿ 2ನೇಯ ಸ್ಥಾನದಲ್ಲಿತ್ತು.[1] ಎಂಬುದನ್ನು ನಾವು ಗಮನಿಸಬೇಕಾದ ಸಂಗತಿಯಾಗಿದೆ ಹೀಗೆ ದೇಶೀಯ ಸಂಸ್ಥಾನಗಳನ್ನು ಕುರಿತ ಇತಿಹಾಸದಲ್ಲಿ ವಸಾಹತುಶಾಹಿ ಆಳ್ವಿಕೆಯ ತಂತ್ರಗಳ ರಂಗ ಸ್ಥಳದಂತಿರುವ ಮೈಸೂರು ಸಂಸ್ಥಾನ ಅನೇಕ ದೇಶಿ ಮತ್ತು ವಿದೇಶಿ ವಿದ್ವಾಂಸರಿಗೆ ಆಕರ್ಷಣೀಯ ಕ್ಷೇತ್ರವಾಗಿದೆ. ವಿದೇಶಿಯರಾದ ಕರ್ನಲ್ ಮೆಕೆಂಜಿ, ಕರ್ನಲ್ ಮಾರ್ಕ್ಸ್‌ವಿಲ್ಕ್ಸ್, ಜೇಮ್ಸ್ ಮೆನ್ನರ್ ಫ್ರಾನ್ಸಿಸ್ ಬುಕನನ್ ಮುಂತಾದವರುಗಳು ತಮ್ಮದೇ ಆದ ರೀತಿಯಲ್ಲಿ ಮೈಸೂರು ರಾಜ್ಯವನ್ನು ಕುರಿತು ಬರವಣಿಗೆಗಳಲ್ಲಿ ನಿರೂಪಿಸಿರುವುದನ್ನು ಕಾಣಬಹುದಾಗಿದೆ. ಅದೇ ರೀತಿ ದೇಶೀಯ ಬರಹಗಾರರುಗಳಾದ ಸಿ.ಹಯವದನರಾವ್, ಎಂ. ಶಾಮರಾವ್, ಬಿ.ಎಲ್. ರೈಸ್ ಪ್ರಮುಖರು.[2]

ಸಿ. ಹಯವದನರಾವ್ ರವರು ನಿಜವಾಗಿಯೂ ಬಹುಮುಖೀ ಪ್ರತಿಭೆಯನ್ನು ಹೊಂದಿದ್ದ ಮಹನೀಯರು. ಆಧುನಿಕ ಮೈಸೂರು ರಾಜ್ಯದ ಸಂಸ್ಥಾನದ ರಚನೆಯನ್ನು ನಿರೂಪಿಸುವಲ್ಲಿ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತಾರೆ. ಇವರ ರಚಿಸಿರುವ ಕೃತಿಗಳನ್ನು ತಿಳಿಸುವುದೇ ಈ ಲೇಖನದ ಉದ್ದೇಶವಾಗಿದೆ.

---

[1] .ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿ, ಮೈಸೂರು.

ಸಿ.ಹಯವದನರಾವ್ ಅವರು ದೇಶೀಯ ಚರಿತ್ರಕಾರರೂ ಆಗಿ ಗುರುತಿಸಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ.[3] ಎಂಬುದಾಗಿಯು ಗ್ರಹಿಸಬಹುದಾಗಿದೆ. ಮೈಸೂರು ಸೇವೆಯಲ್ಲಿದ್ದಾಗ ರಾವ್ ಅವರು ಮಿಥಿಕ್ ಸೊಸೈಟಿಯೊಂದಿಗೆ ಸಂಬಂಧ ಹೊಂದಿದ್ದರು ಮತ್ತು ಅವರು ತಮ್ಮ ಜಂಬೂ – ಗಾತ್ರದ ಕೃತಿಗಳ ಜೊತೆಗೆ ಮೈಸೂರು ಇತಿಹಾಸದ ಅಂಶಗಳ ಕುರಿತು ಮಿಥಿಕ್ ಸೊಸೈಟಿಯ ಜರ್ನಲ್‌ಗೆ ಹಲವಾರು ಲೇಖನಗಳನ್ನು ನೀಡಿದ್ದರು. 1877 ಮತ್ತು 1897ರಲ್ಲಿ ಪ್ರಕಟಗೊಂಡ ಬಿ.ಎಲ್.ರೈಸ್‌ರವರ **'ಮೈಸೂರು ಗೆಜೆಟಿಯರ್'** ಯನ್ನು 1924ರಲ್ಲಿ ಸಿ.ಹಯವದನರಾವ್ ಅವರಿಗೆ ಪರಿಷ್ಕರಣೆ ಮಾಡಲು ನಿಯೋಜಿಸಲಾಯಿತು. ಈ ಆವೃತ್ತಿಯು 1930ರಲ್ಲಿ ಹೊರಬಂದಿತು.

### ಸಿ. ಹಯವದನರಾವ್‌ರವರ ಮೈಸೂರು ಗೆಜೆಟಿಯರ್–1930

ಹಯವದನರಾವ್ ಅವರು ಈ ಕೆಳಗಿನ ಯೋಜನೆಯನ್ನು ಅನುಸರಿಸುವ ಗೆಜೆಟಿಯರ್‌ನ ಹಲವಾರು ತಾಂತ್ರಿಕ ಅಧ್ಯಾಯಗಳ ಚಿಕಿತ್ಸೆಯಲ್ಲಿ ಹಲವಾರು ತಜ್ಞರ ಸಹಾಯವನ್ನು ಒಪ್ಪಿಕೊಂಡಿದ್ದಾರೆ.[4] ಅವರು ಗೆಜೆಟಿಯರ್‌ನಲ್ಲಿ ನಿರೂಪಿಸಿರುವ ಗೆಜೆಟಿಯರ್ ಸಂಪುಟಗಳು ಮತ್ತು ಭಾಗಗಳನ್ನು ಸ್ಥೂಲವಾಗಿ ನೋಡುವುದಾದರೆ.

| | |
|---|---|
| **1) ಸಂಪುಟ–1** | **ಇಲ್ಲಿ ಡಿಸ್ಕ್ರಿಪ್ಟಿವ್:** ಎಂಬ ಮುಖ್ಯವಾದ ಶೀರ್ಷಿಕೆ ಕೊಟ್ಟು ಮೈಸೂರಿಗೆ ಸಂಬಂಧಪಟ್ಟಂತೆ ಭೌತಿಕ ಅಂಶಗಳು, ಭೂ ವಿಜ್ಞಾನ, ಹವಾಮಾನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಜನಾಂಗಶಾಸ್ತ್ರ ಮತ್ತು ಜಾತಿ, ಭಾಷೆ ಧರ್ಮದ ಜನಸಂಖ್ಯೆ ಮತ್ತು ಸಾರ್ವಜನಿಕ ಆರೋಗ್ಯ ಮತ್ತು ಪ್ರಮುಖ ಅಂಕಿ–ಅಂಶಗಳೊಂದಿಗೆ ವ್ಯವಹರಿಸುವುದು. |
| **2) ಸಂಪುಟ–2 ಭಾಗ–1 :** | **ಇಲ್ಲಿ ಮೂಲಗಳು (Source) :** ಎಂಬ ಬರಹದೊಂದಿಗೆ ಪ್ರಾರಂಭವಾಗುತ್ತದೆ. ಇಲ್ಲಿ ತಿಳಿಸಿರುವಂತಹ ಪ್ರಮುಖ ಅಂಶಗಳೆಂದರೆ ಮೈಸೂರಿನ ಇತಿಹಾಸದ ವಿವಿಧ ಅಂಶಗಳಿಗೆ ಸಂಬಂಧಪಟ್ಟಂತೆ ಮೂಲ ಸಾಮಾಗ್ರಿಗಳೊಂದಿಗೆ ವ್ಯವಹರಿಸುವುದು. ಟಿಪ್ಪು ಸುಲ್ತಾನನ ಪತನದ ವಿಚಾರಗಳು ಕಂಡುಬರುತ್ತವೆ. ಸಾಂಪ್ರಾದಾಯಿಕವಾಗಿ ಅಂಕಿ–ಸಂಖ್ಯೆ(ಡೇಟಾ)ಯನ್ನು ಪುರಾತತ್ವಶಾಸ್ತ್ರದ ಮತ್ತು ಸಾಹಿತ್ಯಕ ಮೂಲಗಳೆಂದು ವರ್ಗೀಕರಿಸುವುದು. ಮೈಸೂರು ಇತಿಹಾಸದ ಅವಧಿಗಳು ಮತ್ತು ಪ್ರದೇಶದ ಪೂರ್ವ ಮತ್ತು ಪೂರ್ವ ಇತಿಹಾಸಗಳೊಂದಿಗೆ ವ್ಯವಹರಿಸುವ ವಿಭಾಗಗಳಿಂದ ಇದು ಮುಂಚಿತವಾಗಿರುತ್ತದೆ. |
| **3) ಸಂಪುಟ–2** | **ಐತಿಹಾಸಿಕ** : ಎಂಬ ತಲೆಬರಹ ಈ ಸಂಪುಟದಲ್ಲಿ ಕಂಡುಬರುತ್ತದೆ. |

| | |
|---|---|
| **ಭಾಗ–2 :** | ನಂದಸರಯುಗದಿಂದ ಸೇಯುನರ ಕಾಲದವರೆಗಿನ (1318) ಮೈಸೂರಿನ ಇತಿಹಾಸವನ್ನು ವ್ಯವಹರಿಸುವುದು, ಪ್ರತಿ ರಾಜವಂಶದ ಮೂಲ ನಿರ್ಧಿಷ್ಟ ಆಡಳಿತಗಾರರ ಸಾಧನೆಗಳು ಮತ್ತು ಅವರ ದೇಶೀಯ ಜೀವನ ಮತ್ತು ಕೆಲವು ಅವಧಿಗಳ ಸಾಮಾಜಿಕ ಆಡಳಿತ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳ ವಿವರಗಳೊಂದಿಗೆ ಅದರ ರಾಜಕೀಯ ಇತಿಹಾಸವನ್ನು ಚರ್ಚಿಸಲಾಗಿದೆ. |
| **4) ಸಂಪುಟ–2 ಭಾಗ–3 :** | **ಐತಿಹಾಸಿಕ:** ಎಂಬ ಬರಹದೊಂದಿಗೆ ಪ್ರಾರಂಭವಾಗಿ ವಿಜಯನಗರದ ಇತಿಹಾಸ ಮತ್ತು 1776ರವರೆಗಿನ ಸಮಕಾಲೀನ ಆಡಳಿತ ಮನೆತನಗಳ ಬಗ್ಗೆ. |
| **5) ಸಂಪುಟ–2 ಭಾಗ–4 :** | **ಐತಿಹಾಸಿಕ:** ಮೈಸೂರಿನ ಇತಿಹಾಸವು 1565 ರಿಂದ ಪ್ರಾರಂಭವಾಗಿ 1922ರ ಅಂದರೆ ಎಂ.ಕಾಂತರಾಜೇ ಅರಸ ರವರ ದಿವಾನ ಮುಕ್ತಾಯದವರೆಗೆ ಈ ಸಂಪುಟವು ಮಾಹಿತಿ ಒದಗಿಸುತ್ತವೆ. |
| **6) ಸಂಪುಟ–3** | **ಆರ್ಥಿಕ :** ಇದು ವಿವರಿಸಿದಂತೆ ವಿವಿಧ ಅಂಶಗಳಲ್ಲಿ ಅವರು ಅಸ್ತಿತ್ವದಲ್ಲಿದ್ದಂತೆ ವ್ಯವಹರಿಸುವುದು. |
| **7) ಸಂಪುಟ–4** | **ಆಡಳಿತಾತ್ಮಕ :** ಎಂಬ ಮುಖ್ಯ ಭಾಗದೊಂದಿಗೆ ಪ್ರಾರಂಭವಾಗುತ್ತದೆ. ಸಾಮಾನ್ಯವಾಗಿ ಇದು 1831 ರಿಂದ ಆಡಳಿತ ವ್ಯವಸ್ಥೆಯ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ವ್ಯವಹರಿಸುವುದು. ಮತ್ತು ಒಂದು ಅಧ್ಯಾಯದಲ್ಲಿ ಹಿಂದಿನ ಅವಧಿಗಳನ್ನು ಪರಿಗಣಿಸಲಾಗಿದೆ. |
| **8) ಸಂಪುಟ–5** | **ಗೆಜೆಟಿಯರ್:** ಜಿಲ್ಲೆಯ ವಿವಿಧ ಅಂಶಗಳ ಬಗ್ಗೆ ವಿವರಣಾತ್ಮಕ ಚಿಕಿತ್ಸೆಯನ್ನು ನೀಡುವುದು. |

**(ಸಂಗ್ರಹ: ಮೇಲಿನವುಗಳನ್ನು ಸಿ.ಹಯವದನರಾವ್ ರವರ ಮೈಸೂರು ಗೆಜೆಟಿಯರ್ ವಿವಿಧ ಸಂಪುಟಗಳಿಂದ ಸಂಗ್ರಹಿಸಿ ರಚಿಸಲಾಗಿದೆ)**

ಸಿ.ಹಯವದನ್‌ರಾವ್‌ರವರು ಮೈಸೂರು ಗೆಜೆಟಿಯರ್‌ಗಳಲ್ಲದೇ ಮೈಸೂರು ಸಂಸ್ಥಾನದ ಇತಿಹಾಸಕ್ಕೆ ಸಂಬಂಧಪಟ್ಟಂತೆ 3 ಕೃತಿಗಳನ್ನು ರಚಿಸಿರುವುದನ್ನು ಕಾಣಬಹುದು. ಹಿಸ್ಟರಿ ಆಫ್ ಮೈಸೂರು ಎಂಬ 3 ಸಂಪುಟಗಳಿಂದ ಕೂಡಿದ್ದು ಮೈಸೂರು ಸಂಸ್ಥಾನದ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಒದಗಿಸುವ ಬೃಹತ್ ಆಕಾರಗಳಾಗಿವೆ. 1943ರಲ್ಲಿ ಪ್ರಕಟವಾದ ಈ ಸಂಪುಟಗಳು ಸುಮಾರು 40 ವರ್ಷಗಳ ಅಧ್ಯಯನದ ಅಂತಿಮ ಉತ್ಪನ್ನವಾಗಿದೆ.[5]

ಇದು ರಾಜಮನೆತನಗಳ ಒಡೆಯರ್‌ಗಳ ಇತಿಹಾಸವನ್ನು 1399ರಲ್ಲಿ ಅದರ ಮೂಲದಿಂದ 1799ರಲ್ಲಿ ಕೊನೆಯ ಆಂಗ್ಲೋ–ಮೈಸೂರು ಯುದ್ಧದ ಸಮಯದಲ್ಲಿ ಟಿಪ್ಪು ಸುಲ್ತಾನನ ಪತನದವರೆಗೆ ಒಳಗೊಂಡಿದೆ. ಈ ಸಂಪುಟಗಳನ್ನು ಈ ಕೆಳಗಿನಂತೆ ಸ್ಥೂಲವಾಗಿ ನೋಡುವುದಾದರೆ.

- ಹಿಸ್ಟರಿ ಆಫ್ ಮೈಸೂರು–ಸಂಪುಟ–I ರ ಸಂಪುಟವು 1399 – 1704 ರವರೆಗೆ ಅಂದರೆ ಯದುರಾಯ (ವಿಜಯ) ನಿಂದ ಪ್ರಾರಂಭವಾಗಿ ಚಿಕ್ಕದೇವರಾಜ ಒಡೆಯರ್ ರವರೆಗೆ ಕಂಡುಬರುವುದು.[6] ಒಟ್ಟು 16 ಅಧ್ಯಾಯಗಳನ್ನು ಒಳಗೊಂಡಿದ್ದು 575 ಪುಟಗಳನ್ನು ಒಳಗೊಂಡಿದೆ. ಇಲ್ಲಿ ಯದುರಾಯ (ವಿಜಯ) – 1399–1423, ಹಿರಿಯ ಬೆಟ್ಟದ ಚಾಮರಾಜ ಒಡೆಯರ್–I 1423–1459, ತಿಮ್ಮರಾಜ ಒಡೆಯರ್–I 1459–1478, ಹಿರಿಯ ಚಾಮರಾಜ ಒಡೆಯರ್–II 1478–1513, ಹಿರಿಯ ಬೆಟ್ಟದ ಚಾಮರಾಜ ಒಡೆಯರ್–III 1513–1553, ತಿಮ್ಮರಾಜ ಒಡೆಯರ್–II 1553–1572, ಬೋಳ ಚಾಮರಾಜ ಒಡೆಯರ್– IV 1572–1576, ಬೆಟ್ಟದ ಒಡೆಯರ್–1576–1578, ರಾಜ ಒಡೆಯರ್–1578–1617, ಚಾಮರಾಜ ಒಡೆಯರ್–V 1617–1637 ಇಮ್ಮಡಿ ರಾಜ ಒಡೆಯರ್ 1637–1638, ಕಂಠೀರವ–ನರಸರಾಜ ಒಡೆಯರ್-I – 1638–1659 ದೇವರಾಜ ಒಡೆಯರ್ 1659–1673, ಚಿಕ್ಕದೇವರಾಜ ಒಡೆಯರ್ 1673–1704 ರವರೆಗೆ ಹಿಸ್ಟರಿ ಆಫ್ ಮೈಸೂರು ಸಂಪುಟ–1 ತಿಳಿದು ಬರುವುದು. ಈ ದೊರೆಗಳ ರಾಜಕೀಯ ಏಳ್ಗೆ, ಸಾಮಾಜಿಕ, ರಾಜಕೀಯ, ಸಂಬಂಧಿಸಿದ ಅಂಶಗಳನ್ನು ಬಹು ಮುಖ್ಯವಾಗಿ ಚರ್ಚೆ ಮಾಡಿರುವುದನ್ನು ಕಾಣಬಹುದು.
- **ಹಿಸ್ಟರಿ ಆಫ್ ಮೈಸೂರು** –ಸಂಪುಟ–2ರಲ್ಲಿ, 1704–1766 ರವರೆಗೆ ತಿಳಿಸುತ್ತದೆ.[7] ಇದು ಕಂಠೀರವ ನರಸರಾಜ ಒಡೆಯರ್–II ರವರಿಂದ ಹಿಡಿದು ಕೃಷ್ಣರಾಜ ಒಡೆಯರ್–II ರವರೆಗೆ ತಿಳಿಸುತ್ತದೆ. 16 ಅಧ್ಯಾಯಗಳನ್ನು ಒಳಗೊಂಡ ಬೃಹತ್ ಗ್ರಂಥವಾಗಿದೆ. ಸಿ. ಹಯವದನರಾವ್ ಈ ಸಂಪುಟದಲ್ಲಿ ಸಾಕಷ್ಟು ಮಾಹಿತಿಯನ್ನು ಕಟ್ಟಿಕೊಟ್ಟಿದ್ದಾರೆ.

  ಇಲ್ಲಿ ಕಂಠೀರವ ನರಸರಾಜ ಒಡೆಯರ್–II 1704–1714 ಕೃಷ್ಣರಾಜ ಒಡೆಯರ್–I 1714–1732, ಚಾಮರಾಜ ಒಡೆಯರ್–VI 1732–1734, ಕೃಷ್ಣರಾಜ ಒಡೆಯರ್–II 1734–1766 ರವರೆಗೆ ತಿಳಿಸುವುದು. ಈ ಸಂಪುಟವು ಬಹಳ ಮುಖ್ಯವಾಗಿ ಮೈಸೂರು ಸಂಸ್ಥಾನದ ಬಗ್ಗೆ ಹೆಚ್ಚು ಬೆಳಕನ್ನು ತೋರಿಸುವುದರ ಜೊತೆಗೆ ಮಾಹಿತಿಯನ್ನು ಒದಗಿಸುವ ಮುಖ್ಯ ಆಕಾರಗಳಾಗಿವೆ. ಕೃಷ್ಣರಾಜ

ಒಡೆಯರ್ ಬಗ್ಗೆ ಅವನ ಕಾಲದ ಸಾಧನೆಗಳು, ದಿಗ್ವಿಜಯಗಳ ಬಗ್ಗೆ ಒಟ್ಟು 13 ಅಧ್ಯಾಯಗಳನ್ನು ಮೀಸಲಟ್ಟಿರುವುದು ಗಮನಾರ್ಹವಾದ ಸಂಗತಿಯಾಗಿದೆ.[8]

- **ಹಿಸ್ಟರಿ ಆಫ್ ಮೈಸೂರು–** ಸಂಪುಟ–3ರ ಕೃತಿಯು 1766–1799 ರವರೆಗೆ ತಿಳಿಸುತ್ತದೆ. 1945 ರಲ್ಲಿ ಮುದ್ರಣಗೊಂಡಿರುವುದನ್ನು ಕಾಣಬಹುದು. ಇಲ್ಲಿ ಅನೇಕ ವಿಚಾರಗಳನ್ನು ವಿಶ್ಲೇಷಣಾತ್ಮಕವಾಗಿ ತಿಳಿಸಿರುವುದನ್ನು ಕಾಣಬಹುದಾಗಿದೆ. ನಂಜರಾಜ ಒಡೆಯರ್ 1766–1770 ರವರೆಗೆ ರಾಜ್ಯಾಭಾರ ಮಾಡಿರುವ ಬಗ್ಗೆ, ಹಾಗೂ ಇನ್ನಿತರ ಅಂಶಗಳ ಬಗ್ಗೆ ಇಲ್ಲಿ ಉಲ್ಲೇಖಿಸಿರುತ್ತಾರೆ. ಬೆಟ್ಟದ ಚಾಮರಾಜ ಒಡೆಯರ್–VII (1770–1776) ಇವರ 6 ವರ್ಷಗಳ ಅಧಿಕಾರವಧಿಯ ಬಗ್ಗೆ ಮೈಸೂರು ಮರಾಠದ ಸಂಬಂಧದ ಬಗ್ಗೆ ಇಲ್ಲಿ ಗ್ರಹಿಸಿರುವುದನ್ನು ಮನಗಾಣಬಹುದು.[9]

  ಖಾಸ ಚಾಮರಾಜ ಒಡೆಯರ್–VIII (1776–1796) ಬಗ್ಗೆ ಪ್ರಸ್ತಾಪಿಸಲಾಗಿದೆ.

  ಹೈದರ್ ಮತ್ತು ದಳವಾಯಿಗಳ ಬಗ್ಗೆಯೂ ಅವರು ಮಾಹಿತಿ ಕೊಟ್ಟಿದ್ದಾರೆ. ಹೈದಾರನ ದಿಗ್ವಿಜಯಗಳು, ಹೈದರನ ವ್ಯಕ್ತಿತ್ವವನ್ನು ತಿಳಿಸಿಕೊಟ್ಟಿರುವುದನ್ನು ಕಾಣಬಹುದಾಗಿದೆ. ಖಾಸ ಚಾಮರಾಜ ಒಡೆಯರ್ ರವರಿಗೆ ಒಟ್ಟು 13 ಅಧ್ಯಾಯಗಳನ್ನು ಮೀಸಲಿಟ್ಟಿರುವುದನ್ನು ಗಮನಿಸಬಹುದಾಗಿದೆ. ಖಾಸ ಚಾಮರಾಜ ಒಡೆಯರ್‌ರವರ ಮರಣ ಹೊಂದುವವರೆಗಿನ ವಿಷಯಗಳನ್ನು ತಿಳಿಸಿರುವುದನ್ನು ನೋಡಬಹುದಾಗಿದೆ.

19ನೇ ಅಧ್ಯಾಯವನ್ನು ಟಿಪ್ಪುಸುಲ್ತಾನ ಪತನದ ಬಗ್ಗೆ ತಿಳಿಸಿಕೊಟ್ಟಿದ್ದಾರೆ.[10] ಅಂದರೆ ಇಲ್ಲಿ ಟಿಪ್ಪುಸುಲ್ತಾನ ಸೋಲಿಸುವುದರ ಬಗ್ಗೆ, 1799 ನಂತರದಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡುವುದರ ಬಗ್ಗೆಯೂ, ಟಿಪ್ಪುವಿನ ಸೋಲುವುದಕ್ಕೆ ಕಾರಣ ಮತ್ತು ಪರಿಣಾಮಗಳನ್ನು, ಬಹಳವಾಗಿ ಚಿತ್ರಿಸಿದ್ದಾರೆ ಟಿಪ್ಪು ಮತ್ತು ಹೈದರನ ಬಗ್ಗೆ ವಸಾಹತುಶಾಹಿ ಕಾಲದ ಮಾರ್ಕ್ಸ್‌ವಿಲ್ಕ್ಸ್ ಚಿತ್ರಣ, ಟಿಪ್ಪುವಿನ ಗುಣಾವಗುಣಗಳನ್ನು ವಿಶ್ಲೇಷಣಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ.

ಟಿಪ್ಪುವಿನ ಕಾಲದಲ್ಲಾದ ವಾಸ್ತುಶಿಲ್ಪದ ಬೆಳವಣಿಗೆ ಅಂದರೆ ಇಂಡೋ–ಸಾರ್ಸೆನಿಕ್, ಬಿಜಾಪುರದ ಶೈಲಿ, ಮೊಘಲ್ ಶೈಲಿ ಮುಂತಾದವುಗಳನ್ನು ತಿಳಿಸಿದ್ದಾರೆ.

ಸಿ. ಹಯವದನರಾವ್ ರವರ ಮಹಾನ್ ಐತಿಹಾಸಿಕ ಸಾಧನೆಯೆಂದರೆ ಮೈಸೂರು ಇತಿಹಾಸ ಮತ್ತು ವಿಶೇಷವಾಗಿ ಮೇಲೆ ತಿಳಿಸಿದ 3ನೇ ಸಂಪುಟ. ಪ್ರಾಯೋಗಿಕವಾಗಿ ಈ ಬೃಹತ್ ಸಂಪುಟ ಸಂಪೂರ್ಣ ಹೈದರಾಲಿ ಮತ್ತು ಅವನ ಮಗ ಟಿಪ್ಪು ಸುಲ್ತಾನ ವ್ಯವಹರಿಸುತ್ತದೆ. ಈ ಹನ್ನೆರಡು ನೂರು ಪುಟಗಳ ದಾಖಲಿತ ಅಧ್ಯಯನದಲ್ಲಿ ಹಯವದನರಾವ್ ಶ್ರೇಷ್ಠ ಇತಿಹಾಸಕಾರರಾಗಿ ಹೊರಹೊಮ್ಮಿದ್ದಾರೆ.[11] ಎಂದರೆ ಅತಿಶಯೋಕ್ತಿವಲ್ಲ. ರಾವ್ ಅವರ ಮೊದಲು ಅಥವಾ ನಂತರ ಕೆಲವರು ಈ ನಿರ್ಧಿಷ್ಟ ವಿಷಯವನ್ನು ಅಂತಹ ರೀತಿಯಲ್ಲಿ ಚರ್ಚಿಸಿದ್ದಾರೆ ಈ ಸಂಪುಟದಲ್ಲಿ ಕೊನೆಯ 20ನೇಯ

ಅಧ್ಯಾಯದಲ್ಲಿ ಕ್ರಿ.ಶ. 1799 ರಿಂದ 1811 ರವರೆಗೆ ಅಪ್ರಾಪ್ತ ವಯಸ್ಕರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಮೈಸೂರು ಸಂಸ್ಥಾನದ ದಿವಾನರಾಗಿ ನೇಮಕಗೊಂಡ ಪೂರ್ಣಯ್ಯನ ಆಡಳಿತವನ್ನು ಪರಿಶೀಲಿಸುವಂತಹದ್ದಾಗಿದೆ. ಸಬ್ಸಿಡಿಯರ್ ಒಪ್ಪಂದಕ್ಕೆ ಸಹಿ ಹಾಕಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ಜುಲೈ ತಿಂಗಳ 8ರಿಂದ ಪ್ರತಿವರ್ಷವೂ 7 ಲಕ್ಷ ಸ್ಟಾರ್ ಪಗೋಡಗಳನ್ನು ನೀಡಬೇಕಾಯಿತು.[12] ಹೀಗೆ ಹಲವಾರು ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ನೋಡಬಹುದು.

ಹೀಗೆ ಸಿ. ಹಯವದನರಾವ್ ಬರವಣಿಗೆಗಳಲ್ಲಿ **ಮೈಸೂರು ಗೆಜೆಟೆಯರ್ ಮತ್ತು ಹಿಸ್ಟರಿ ಆಫ್ ಮೈಸೂರು** ಸಂಪುಟಗಳಲ್ಲಿ ನೀಡಲಾಗಿಯೂ ಇವುಗಳನ್ನು ಮುಂದೆ ಸಮಗ್ರ ಅಧ್ಯಯನ ಮಾಡಿದ್ದಾರೆ, ಮೈಸೂರು ಸಂಸ್ಥಾನದ ಬಗ್ಗೆ ತಿಳಿದುಕೊಳ್ಳುವ ಆಸಕ್ತರಿಗೆ, ಸಂಶೋಧನೆ ಕೈಗೊಳ್ಳುವವರಿಗೆ ಉತ್ತಮ ಕೈಪಿಡಿಯಾಗಿದೆ. ಮತ್ತು ಇದು ಮೂಲ ಗ್ರಂಥವಾಗಿರುವುದರಿಂದಲೂ ಕಡ್ಡಾಯವಾಗಿ ನೋಡಲೇಬೇಕಾಗಿರುತ್ತದೆ.

ಮೈಸೂರು ಗೆಜೆಟಿಯರ್ 8 ಸಂಪುಟಗಳು, ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ ರಾಜಕೀಯ, ಆರ್ಥಿಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ ರಾಜಕೀಯವಾಗಿಯೂ, ದಿವಾನರ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ.

ಹಿಸ್ಟರಿ ಆಫ್ ಮೈಸೂರು– ಈ 3 ಸಂಪುಟಗಳಲ್ಲಿಯೂ, 1399–1799 ರವರೆಗೆ ಮೈಸೂರು ಸಂಸ್ಥಾನದ ದೊರೆಗಳ ಬಗ್ಗೆಯೂ, ವಿಸ್ತೃತವಾಗಿ ಚರ್ಚಿಸಿದ್ದಾರೆ. ಆದರೆ ಈ ಲೇಖನದಲ್ಲಿ ಸಿ. ಹಯವದನರಾವ್ ಕೃತಿಗಳು ಮೈಸೂರು ಸಂಸ್ಥಾನದ ರೂಪಿಸುವಲ್ಲಿ ಹೇಗೆ ನೆರವಾಗಿದೆ ಹಾಗೂ ಅಧ್ಯಾಯಗಳಲ್ಲಿ ಯಾವ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ ಎಂಬುದನ್ನು ಸ್ಥೂಲ ನೋಟ ಮಾತ್ರ ನೋಡಲಾಗಿಯೂ, ಇದನ್ನು ಮುಂದೆ ವಿವರವಾಗಿ ಅಧ್ಯಯನ ಮಾಡುವುದರಿಂದಾಗಿಯೂ ಅನೇಕ ಮಾಹಿತಿಗಳು ದೊರೆಯುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ ಎಂಬುದಾಗಿಯು ಹೇಳಬಹುದಾಗಿದೆ.

**ಅಡಿ ಟಿಪ್ಪಣಿ**

[1] ಡಾ. ಅಶ್ವತ್ಥ ನಾರಾಯಣ – ಮೈಸೂರು ಸಂಸ್ಥಾನದಲ್ಲಿನ ರಾಷ್ಟ್ರೀಯ ಚಳುವಳಿಯ ಒಳನೋಟಗಳು (1870–1940) 2008 ಪುಟ–2.

[2] ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ಅಧ್ಯಯನ ಸಂಪುಟ–4, ಸಂಚಿಕೆ ಜನವರಿ–ಜೂನ್2010. ಪುಟ–188

[3] ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ಅಧ್ಯಯನ ಸಂಪುಟ–4, ಸಂಚಿಕೆ ಜನವರಿ–ಜೂನ್2010. ಪುಟ–188

[4] ದ ಕ್ವಾಟರ್ಲೀ ಜನರಲ್ ಆಫ್ ಮಿಥಿಕ್ ಸೊಸೈಟಿ ವ್ಯಾಲ್ಯೂಮ್ 80 ನಂ.4 1989 ಪುಟ 248.

[5] ದ ಕ್ವಾಟರ್ಲೀ ಜನರಲ್ ಆಫ್ ಮಿಥಿಕ್ ಸೊಸೈಟಿ ವ್ಯಾಲ್ಯೂಮ್ 80 ನಂ.4 1989 ಪುಟ 250.

[6] ಸಿ.ಹಯವದನರಾವ್ – ಹಿಸ್ಟರಿ ಆಫ್ ಮೈಸೂರು ವ್ಯಾಲ್ಯೂಮ್–I (1399–1704) 1943 ಪುಟ40.

[7] ಸಿ.ಹಯವದನರಾವ್ – ಹಿಸ್ಟರಿ ಆಫ್ ಮೈಸೂರು ವ್ಯಾಲ್ಯೂಮ್–II (1704–1766) 1946 ಪುಟ–1.

[8] ಸಿ.ಹಯವದನರಾವ್ –ಹಿಸ್ಟರಿ ಆಫ್ ಮೈಸೂರು ವ್ಯಾಲ್ಯೂಮ್–II (1704–1766)1946,ಪು–04–16.

[9] ಸಿ.ಹಯವದನರಾವ್ – ಹಿಸ್ಟರಿ ಆಫ್ ಮೈಸೂರು ವ್ಯಾಲ್ಯೂಮ್–III (1766–1799) 1946 ಪುಟ–11.

[10] ಸಿ.ಹಯವದನರಾವ್ –ಹಿಸ್ಟರಿ ಆಫ್ ಮೈಸೂರು ವ್ಯಾಲ್ಯೂಮ್–II (1704–1766) 1946 ಪುಟ–32.

[11] Q.J.M.S ವ್ಯಾಲ್ಯೂಮ್ 80 1989 ಪುಟ 254.

[12] ಡಾ॥ ಆರ್. ಗೋಪಾಲ್ ಮತ್ತು ಡಾ॥ ಎಸ್. ನರೇಂದ್ರ ಪ್ರಸಾದ್ – ಮುಮ್ಮಡಿ ಕೃಷ್ಣರಾಜ ಒಡೆಯರು ಒಂದು ಚಾರಿತ್ರಿಕ ಅಧ್ಯಯನ ಕ್ರಿ.ಶ.1799–1868ರವರೆಗೆ) ಪುಟ–19.